**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸೆಷನ್ಸ್‌ಕೇಸ್ ನಂ. 17/2018**

**ದೋ.ಸಾ. : 10 ಪ್ರಾ.ಸಾ. : 3**

ಸಾಕ್ಷಿಯ ಹೆಸರು : ಸುಪ್ರೀಯಾ
ತಂದೆಯ ಹೆಸರು : ಮಂಜುನಾಥ ಶೇಟ್
ವಯಸ್ಸು : 26 ವರ್ಷ
ಉದ್ಯೋಗ : ಗುಮಾಸ್ತ , ದೈವಜ್ಞ ಸಹಕಾರಿ ಸಂಘ, ಭಟ್ಕಳ
ವಾಸ : ಸೋನಾರಕೇರಿ , ಭಟ್ಕಳ

**ದಿನಾಂಕಃ 04-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದೋಸಾ-9 ನನ್ನ ತಾಯಿ . ದೋಸಾ-8 ನನಗೆ ಪರಿಚಯ ಇದ್ದರು. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಪರಿಚಯ ಇದ್ದಾನೆ ಅವನು ನನ್ನ ಪಕ್ಕದ ಮನೆಯವನು. ದೋಸಾ-8 ರವರ ಮನೆ ನನ್ನ ಮನೆ ಎದುರುಗಡೆ ಇತ್ತು. ದಿನಾಂಕ 01.02.2017 ರಂದು ರಾತ್ರಿ ಸುಮಾರು 9.00 ರಿಂದ 9.15 ಗಂಟೆ ಸಮಯದಲ್ಲಿ ನಾನು ನನ್ನ ತಾಯಿ ಇಬ್ಬರೇ ಮನೆಯಲ್ಲಿ ಇದ್ದೆವು . ಆಗ ದೋಸಾ-8 ರವರ ಮನೆಯಿಂದ ದೋಸಾ-1 ಕೂಗಿದ ಶಬ್ದ ಕೇಳಿಸಿತು. ಆಗ ನಾನು ಮತ್ತು ನನ್ನ ತಾಯಿ ಅಲ್ಲಿಗೆ ಹೋದೆವು . ಅಲ್ಲಿ ದೋಸಾ-8 ರವರು ಕೆಳಗೆ ಬಿದ್ದಿದ್ದರು. ಅವರ ಮನೆಯ ಅಡಿಗೆ ಕೋಣೆಯಲ್ಲಿ ಬಿದ್ದಿದ್ದಳು. ಆಕೆಯ ತಲೆಗೆ ಪೆಟ್ಟಾಗಿತ್ತು. ನಾನು ಹೋದಾಗ ಅಲ್ಲಿ ದೋಸಾ-1 ಮತ್ತು 8 ಮಾತ್ರ ಇದ್ದರು. ಅಲ್ಲಿ ಮನೆಯ ಹಿಂದುಗಡೆಯಿಂದ ಒಬ್ಬ ವ್ಯಕ್ತಿ ಹೋದರು ಆದರೆ ಅದು ಯಾರು ಎಂದು ಕತ್ತಲೆಯಾದ ಕಾರಣ ನಾನು ನೋಡಿರುವುದಿಲ್ಲ. ಆರೋಪಿಯೇ ಓಡಿ ಹೋದ ವ್ಯಕ್ತಿ ಎಂದು ನಾನು ಪೊಲೀಸ್ ನವರಿಗೆ ಹೇಳಿಲ್ಲ. ದೋಸಾ-1 ರವರು ಆರೋಪಿ ದೋಸಾ-8 ರವರಿಗೆ ಹೊಡೆದು ಓಡಿ ಹೋದ ಎಂದು ಹೇಳಿದಳು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದ**

2. ದಿನಾಂಕಃ 02.02.2017 ರಂದು ಪೊಲೀಸ್ ನವರು ಘಟನಾ ಸ್ಥಳಕ್ಕೆ ಬಂದಾಗ ಘಟನೆ ಸಮಯದಲ್ಲಿ ನಾನು ಅಲ್ಲಿಗೆ ಹೋದಾಗ ಆರೋಪಿಯೇ ಅಲ್ಲಿಂದ ಓಡಿ ಹೋದ ಎಂದು ಪೊಲೀಸ್ ನವರಿಗೆ ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ. 6 ರಂತೆ ನಾನು ಪೊಲೀಸ್ ನವರಿಗೆ ಆ ಬಗ್ಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಪಕ್ಕದ ಮನೆಯವನು ಆಗಿರುವುದರಿಂದ ಓಡಿ ಹೋದವನು ಆರೋಪಿ ಎಂದು ಗೊತ್ತಿದ್ದರೂ ನೋಡಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎ ಎ ಎ ರವರಿಂದ**

3. ದೋಸಾ-8 ಮತ್ತು ಆರೋಪಿ ನಡುವೆ ಸಿವಿಲ್ ದಾವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಆ ಕಾರಣದಿಂದ ಅವರ ನಡುವೆ ವೈಮನಸ್ಸು ಇತ್ತು ಎಂದರೆ ಗೊತ್ತಿಲ್ಲ. ಆ ಕಾರಣದಿಂದ ದೋಸಾ-8 ರವರು ದೋಸಾ-1 ರವರ ಮೂಲಕ ಸುಳ್ಳು ಪ್ರಕರಣವನ್ನು ಆರೋಪಿ ವಿರುದ್ಧ ದಾಖಲು ಮಾಡಿದ್ದಾಳೆ ಎಂದರೆ ದೋಸಾ-8 ರವರಿಗೆ ತಲೆಗೆ ಏಟು ಆಗಿದ್ದದ್ದು ನಿಜ ಇರುತ್ತದೆ ಮತ್ತು ಅದನ್ನು ನಾನು ನೋಡಿರುತ್ತೇನೆ. ಆರೋಪಿ ಯಾವತ್ತೂ ದೋಸಾ-8 ರವರಿಗೆ ಹಲ್ಲೆ ಮಾಡಿಲ್ಲ ಮತ್ತು ದೋಸಾ-1 ರವರು ಆ ರೀತಿ ನನ್ನ ಮುಂದೆ ಹೇಳಿಲ್ಲ ಎಂದರೆ ಸರಿಯಲ್ಲ. ದೋಸಾ-8 ರವರು ಸ್ನಾನ ಗೃಹದಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಾಳೆ ಎಂದು ನನಗೆ ಗೊತ್ತು ಎಂದರೆ ಸರಿಯಲ್ಲ. ಆಕೆ ಸ್ನಾನ ಗೃಹದಲ್ಲಿ ಬಿದ್ದು ಪೆಟ್ಟು ಮಾಡಿಕೊಂಡಿಲ್ಲ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ